**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 484/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ | ಪ್ರಾ.ಸಾಃ 1 |
| ತಂದೆಯ/ಗಂಡನ ಹೆಸರು | : | ರಂಗಪ್ಪ | ಚಾಸಾಃ 1 |
| ವಯಸ್ಸು | : | 37 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಆರ್.ಗೊಲ್ಲರಹಳ್ಳಿ ಗ್ರಾಮ | ದಿಃ29.01.2026 |

**(ನ್ಯಾಯಾಲಯದ ಆವರಣದಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ಮತ್ತು ಕಕಕ್ಷಿದಾರರನ್ನು ಹೊರತುಪಡಿಸಿ ಇತರೆ ಎಲ್ಲಾ ವಕೀಲರು ಮತ್ತು ಕಕ್ಷಿದಾರರನ್ನು ಹೊರಗೆ ಕಳುಹಿಸಿ ಸಾಕ್ಷ್ಯ ದಾಖಲಿಸಲಾಯಿತು. )**

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1.ಚಾಸಾ.2 ರಿಂದ 4 ರವರು ಗೊತ್ತು. ಚಾಸಾ.5 ರಿಂದ 7 ರವರು ಗೊತ್ತು. ಚಾಸಾ.7 ನನ್ನ ಅತ್ತಿಗೆ. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

2. ದಿನಾಂಕ 07.08.2023 ರಂದು ಸಂಜೆ 4.30 ರ ಸಮಯದಲ್ಲಿ ಆರೋಪಿತರು ರಸ್ತೆಗೆ ಅಡ್ಡಲಾಗಿ ತಂತಿ ಬೇಲಿಯನ್ನು ಹಾಕಿದ್ದರು. ಆಗ ನಾನು ಇಲ್ಲಿ ಮೊದಲಿನಿಂದಲೂ ಓಡಾಡಲು ಸಾರ್ವಜನಿಕ ರಸ್ತೆ ಇದೆ, ಓಡಾಡಲು ದಾರಿ ಬಿಡಿ ಎಂದು ಕೇಳಿದಾಗ, ಆರೋಪಿತರು ಬಿಡುವುದಿಲ್ಲ ಎಂದು ಹೇಳಿ ಗಲಾಟೆ ಮಾಡಿರುತ್ತಾರೆ. ಎಲ್ಲಾ ಆರೋಪಿತರು ಒಟ್ಟಿಗೆ ಬಂದು 1 ನೇ ಆರೋಪಿ ಕೋಲಿನಿಂದ ಬೆನ್ನಿಗೆ ಹೊಡೆದರು. 4 ನೇ ಆರೋಪಿ ಕೈ ಮತ್ತು ಕಾಲುಗಳಿಂದ ನನಗೆ ಹೊಡೆದಿರುತ್ತಾರೆ. 3 ನೇ ಆರೋಪಿ ಕೈ ಮತ್ತು ಕಾಲುಗಳಿಂದ ನನಗೆ ಹೊಡೆದಿರುತ್ತಾರೆ. 3 ನೇ ಆರೋಪಿ ಹಲ್ಲಿನಿಂದ ನನ್ನ ಮುಖಕ್ಕೆ ಮತ್ತು ಕೈಗೆ ಕಚ್ಚಿರುತ್ತಾರೆ. 1 ನೇ ಆರೋಪಿ ಚಾಸಾ.7 ರವರನ್ನು ಹಿಡಿದು ಎಳೆದಾಡಿ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ಆಗ ಚಾಸಾ.4 ರಿಂದ 6 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಬಂದು ದಾಖಲಾಗಿರುತ್ತೇನೆ. ನಾನು ಕೆಳಗೆ ಬಿದ್ದಾಗ 1 ನೇ ಆರೋಪಿ ಕಲ್ಲಿನಿಂದ ನನ್ನ ಎದೆಗೆ ಹೊಡೆದಿರುತ್ತಾರೆ. ಸಾಕ್ಷಿ, ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆ ಮತ್ತು ಕಲ್ಲನ್ನು ನೋಡಿ ಗುರುತಿಸಿದ್ದು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೊಲೀಸರು ಬಂದು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಸಾಕ್ಷಿ ಹೇಳಿಕೆಯ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1

ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ಮರುದಿನ ಬೆಳಗ್ಗೆ 12 ಗಂಟೆಗೆ ಪೊಲೀಸರು ಗಲಾಟೆ ನಡೆದ ಸ್ಥಳದ ಬಳಿ ಮಹಜರನ್ನು ಮಾಡಲು ಬಂದಿದ್ದರು. ಮಹಜರಿನ ಸಮಯದಲ್ಲಿ ಪೊಲೀಸರು ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.1 ಮತ್ತು 2ರ ಕೋಲು ಮತ್ತು ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರಿನ ಸಮಯದಲ್ಲಿ ನನ್ನೊಂದಿಗೆ ಚಾಸಾ.2 ಮತ್ತು 3ರವರು ಇದ್ದರು. ಸಾಕ್ಷಿ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರಿನ ಸಮಯದಲ್ಲಿ ತೆಗೆದ ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಛಾಯಾಚಿತ್ರಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ಚಾಸಾ.2 ಮತ್ತು 3ರವರು ಮಹಜರಿಗೆ ಸಹಿ ಮಾಡಿರುತ್ತಾರೆ. ಸಾಕ್ಷಿ ತನ್ನ ಮೇಲೆ ಹಾಗೂ ಚಾಸಾ.7ರವರ ಮೇಲೆ ಹಲ್ಲೆ ಮಾಡಿದ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ನನಗೆ ಬೋಳಿಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದ,**

4. ನಾನು 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಮಗೆ ಸೇರಿದ ಜಮೀನಿನ ಸ.ನಂ.8/16 ಇರುತ್ತದೆ. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. 1ನೇ ಆರೋಪಿತರಿಗೆ ಸೇರಿದ ಜಮೀನು ಸ.ನಂ.8/8ರಲ್ಲಿ ಇದೆ. ನಮ್ಮ ಮತ್ತು ಆರೋಪಿತರ ಜಮೀನಿಗೆ ನಕಾಶೆ ಕಂಡ ದಾರಿ ಇಲ್ಲ, ಬದಲಾಗಿ ಬಂಡಿ ದಾರಿ ಇದೆ. ನಮ್ಮ ಜಮೀನಿಗೆ ಓಡಾಡಲು ರಾಜಪ್ಪರವರ ಮನೆಯ ಬಳಿ ಪೂರ್ವ ದಿಕ್ಕಿಗೆ ಬಂಡಿ ದಾರಿ ಇದೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ಜಮೀನಿನ ನಡುವೆ ಒಂದುವರೆ ಕಿ.ಮೀ. ಅಂತರ ಇದೆ ಎಂದರೆ ಸರಿಯಲ್ಲ. ನಮಗೆ ಸೇರಿದ ಜಮೀನು ಸ.ನಂ.13ರಲ್ಲಿ

ಇದೆ ಎಂದರೆ ಸರಿಯಲ್ಲ. ಚಾಸಾ.6 ನಮ್ಮ ಸೋದರ ಸಂಬಂಧಿ. ನಾವು ಮತ್ತು ಚಾಸಾ.6 ಅನ್ಯೊನ್ಯವಾಗಿ ಇದ್ದೇವೆ. ಚಾಸಾ.6 ರವರ ತಾಯಿ ಒಮ್ಮೆ ಮತ್ತು ಚಾಸಾ.6 ರವರು ಎರಡುಭಾರಿ ಗ್ರಾಮ ಪಂಚಾಯಿತಿ ಸದಸ್ಯರಾಗಿರುತ್ತಾರೆ. ಆರೋಪಿತರು ಮತ್ತು ನಾವು ಒಂದೇ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ಆರೋಪಿತರು ಚಾಸಾ.6 ರವರ ಪರವಾಗಿ ಮತ ಚಲಾವಣೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ಬೇರೆ ಬೇರೆ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ.6 ಮತ್ತು ಆರೋಪಿತರ ನಡುವೆ ಅನೇಕಬಾರಿ ಗಲಾಟೆ ಆಗಿದೆ ಎಂದರೆ ಸರಿಯಲ್ಲ. ಚಾಸಾ.6 ಮತ್ತು ಆರೋಪಿತರ ನಡುವೆ ಇದೇ ನ್ಯಾಯಾಲಯದಲ್ಲಿ 4 ಪ್ರಕರಣಗಳು ಬಾಕಿ ಇವೆ ಎಂದರೆ ಸರಿಯಲ್ಲ. ಚಾಸಾ.6 ರವರ ಪತ್ನಿಯ ವಿರುದ್ದವೂ ಸಹ ಪ್ರಕರಣ ಇದೆ ಎಂದರೆ ಸರಿಯಲ್ಲ.

5. 1 ನೇ ಆರೋಪಿತರ ಜಮೀನಿನಲ್ಲಿ ಗಲಾಟೆಯ ಪೂರ್ವದಲ್ಲಿಯೇ ತಹಶೀಲ್ದಾರ್, ಹೊಳಲ್ಕೆರೆರವರು ದಾರಿಯನ್ನು ಬಿಡಿಸಿರುತ್ತಾರೆ ಎಂದರೆ ಸಾಕ್ಷಿ ಗಲಾಟೆಯ ನಂತರ ಬಿಡಿಸಿದ್ದಾರೆ ಎಂದು ಹೇಳುತ್ತಾರೆ. 1 ನೇ ಆರೋಪಿತರ ಜಮೀನಿನಲ್ಲಿ ಎರಡುಕಡೆ ದಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ.ನಂ.8/6 ರ ಪಹಣಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆಯದಿದ್ದಾಗ್ಯೂ, 1 ನೇ ಆರೋಪಿತರ ನಡುವಿನ ದ್ವೇಷದ ಹಿನ್ನಲೆಯಲ್ಲಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರ ಕೋಲು ಮತ್ತು ಕಲ್ಲು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಚಾಸಾ.6 ಮತ್ತು ಆರೋಪಿತರ ನಡುವೆ ಮೊದಲಿನಿಂದಲೂ ವೈಮನಸ್ಸು ಇರುವ ಕಾರಣ ಹಾಗೂ ಚುನಾವಣೆಯಲ್ಲಿ ಆರೋಪಿತರು ನಮಗೆ ಸಹಕರಿಸುವುದಿಲ್ಲ ಎಂಬ ಕಾರಣದಿಂದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 20 ವರ್ಷಗಳಿಂದ ನಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. ದಾರಿಯ ವಿಷಯವಾಗಿ ನಮ್ಮ ನಡುವೆ ಯಾವುದೇ ಗಲಾಟೆ ನಡೆಯದಿದ್ದಾಗ್ಯೂ, ಸೃಷ್ಠಿತ ಅಂಶಗಳ ಆಧಾರದಲ್ಲಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾರಿಗೂ ಮತ್ತು ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವರ ಜೀವನ ನಿರ್ವಹಣೆಯನ್ನು ಕಷ್ಟಪಟ್ಟು ಮಾಡುತ್ತಿದ್ದು, ನಾನು ಮತ್ತು ಚಾಸಾ.6 ರವರು ಸೇರಿಕೊಂಡು ಆರೋಪಿತರ ವಿರುದ್ಧ ಪದೇ ಪದೇ ಸುಳ್ಳು ದೂರುಗಳನ್ನು ನೀಡಿ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಚಾಸಾ.6 ರವರ ಸಹೋದರ ಓರ್ವ ಪೊಲೀಸ್ ಉಪನಿರೀಕ್ಷಕರಾಗಿರುತ್ತಾರೆ ಎಂದರೆ ಸರಿ. ಮೊತ್ತೋರ್ವ ಸಹೋದರ ಪಂಚಾಯಿತ ಅಭಿವೃದ್ಧಿ ಅಧಿಕಾರಿಯಾಗಿದ್ದು, ಈಗ ಅಮಾನತ್ತುಗೊಂಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ.6 ರವರ ಸಹೋದರ ಪೊಲೀಸ್ ಇಲಾಖೆಯಲ್ಲಿ ಇದ್ದಾರೆ ಎಂಬ ಕಾರಣದಿಂದ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ